# PSI QUESTION PAPER – 2020
## PAPER – I

**ಗರಿಷ್ಠ ಅಂಕಗಳು: 50** **ಸಮಯ: 90 ನಿ.**

---

**i. ಕೆಳಕಂಡ ಯಾವುದಾದರೊಂದು ವಿಷಯದ ಕುರಿತು 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 20**

1. ಅಂತರ್ಜಾಲ ಮತ್ತು ಮಹಿಳಾ ಸುರಕ್ಷಿತತೆ.
2. ಭಾರತ ಮತ್ತು ಬಹುಸಂಸ್ಕೃತಿ.
3. ಸುಸ್ಥಿರ ಆರ್ಥಿಕ ಅಭಿವೃದ್ಧಿ ಮತ್ತು ಪರಿಸರ.
4. ಸಮ್ಮಿಶ್ರ ಸರಕಾರಗಳ ಪ್ರಸ್ತುತತೆ.
5. ಪ್ರಾದೇಶಿಕತೆ, ರಾಷ್ಟ್ರೀಯತೆ ಮತ್ತು ಸಂವಿಧಾನ.

**ii. ಈ ಕೆಳಕಂಡ ಪ್ಯಾರಾವನ್ನು ಕನ್ನಡದಿಂದ ಇಂಗ್ಲೀಷ್ ಭಾಷೆಗೆ ಅನುವಾದಿಸಿ. 10**

ಚುನಾವಣೆಗಳಲ್ಲಿ ಹೆಚ್ಚಿನ ಸಂಖ್ಯೆಯ ಯುವಜನರು ಮತ ಚಲಾಯಿಸುವುದಿಲ್ಲ ಎನ್ನುವುದರಲ್ಲಿ ಹೊಸತೇನೂ ಇಲ್ಲ. ಆದರೆ ಯಾವ ಕಾರಣಕ್ಕಾಗಿ ಯುವಕರು ಚುನಾವಣೆಯಲ್ಲಿ ತಮ್ಮ ಪ್ರಜಾ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಆಸಕ್ತಿ ತೋರಿಸುವುದಿಲ್ಲ ಎನ್ನುವ ಪ್ರಶ್ನೆಗೆ ಅನೇಕ ರೀತಿಯ ಉತ್ತರಗಳು ಕೇಳಿ ಬರುತ್ತವೆ. ನಮ್ಮ ಮತಕ್ಕೆ ಹೆಚ್ಚು ಬೆಲೆ ಇಲ್ಲ, ಸಾಮಾನ್ಯ ಸಮಸ್ಯೆಗಳನ್ನು ಸಹ ಚುನಾಯಿತ ಸರ್ಕಾರಗಳು ಬಗೆಹರಿಸುವುದಿಲ್ಲ, ಮತದಾನ ಮಾಡುವುದಕ್ಕೆ ಬೇಜಾರು, ಒಳ್ಳೆಯ ಪಕ್ಷ ಅಥವಾ ಅಭ್ಯರ್ಥಿಗಳಿಲ್ಲ. ಬುದ್ಧಿವಂತರು ಹೊಣೆಗಾರಿಕೆ ಇರುವವರು ರಾಜಕೀಯ ಪ್ರವೇಶಿಸುವುದಿಲ್ಲ, ತತ್ವ ಸಿದ್ಧಾಂತ ಮತ್ತು ಉತ್ತಮ ನಾಯಕತ್ವದ ಗುಣ ಇರುವವರು ರಾಜಕೀಯದಲ್ಲಿ ಇಲ್ಲ. ರಾಜಕಾರಣಿಗಳು ಸ್ವಾರ್ಥಿಗಳು ಎಂಬುವಂತಹ ವಿವರಣೆಗಳು ಸಾಮಾನ್ಯವಾಗಿ ಎಲ್ಲೆಡೆ ಕೇಳಿ ಬರುತ್ತದೆ. ಈ ಮಾದರಿಯ ವಿವೇಚನೆಗಳು ಯುವ ಮತದಾರರ ಮನಸ್ಸನ್ನು ಹೊಕ್ಕಿರುವುದಕ್ಕೆ ಪ್ರಮುಖ ಕಾರಣ ರಾಜಕೀಯದ ಬಗ್ಗೆ ಯುವ ಜನರಲ್ಲಿ ಮೂಡಿರುವ ಅಥವಾ ಮೂಡದಿರುವ ಪ್ರಜ್ಞೆ ಎನ್ನಬೇಕಾಗುತ್ತದೆ. ಈ ಪ್ರಜ್ಞೆಯನ್ನು ಮೂಡಿಸಬೇಕಾಗಿರುವವರು ಮನೆಯ ಹಿರಿಯರು, ಮನೆಯ ಆಸುಪಾಸಿನವರು, ರಾಜಕೀಯ ಪಕ್ಷಗಳು ಹಾಗೂ ಮಾಧ್ಯಮದವರು ಆಗಿರುತ್ತಾರೆ.

**iii.** **ಈ ಕೆಳಕಂಡ ಖಂಡಿಕೆಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ** **10**

India is a country with its own history of Cultural, Ethical and Geographical diversity. India as a nation is respected all across the world because of its rich heritage in all aspects of civilization.

India is leading its way since time immemorial as a torch bearer of invention in the fields of Mathematics, Astronomy, Philosophy, Ayurveda and what not. From being a self – sufficient economy to be a colony of British and other European countries. India has seen all phases of its social, political and economic evolution.

Because of the contributions of the Social reformers, Freedom fighters. Philosophers, Political leaders, Scientists, Teachers, Rulers and so on India is now heading towards becoming a Global leader and a Global super power.

**iv.** **ಈ ಕೆಳಗಿನ ಕನ್ನಡ ಲೇಖನವನ್ನು ಗಾತ್ರದಲ್ಲಿ 1/3 ರಷ್ಟಕ್ಕೆ ಇಳಿಸಿ ಸಾರಾಂಶವನ್ನು ಬರೆಯಿರಿ ಮತ್ತು ಅದಕ್ಕೊಂದು ಶೀರ್ಷಿಕೆಯನ್ನು ನೀಡಿ.** **10**

ಯಾವುದೇ ಆಂದೋಲನದಲ್ಲಿ ನಾಯಕತ್ವ ಎಂಬುದು ನಿರ್ಣಾಯಕ ಅಂಶ. ಇದು ಆಂದೋಲನದ ತೀವ್ರತೆಯನ್ನು ಮತ್ತು ದಿಕ್ಕನ್ನು ಪ್ರಭಾವಿತಗೊಳಿಸುತ್ತದೆ. ಅಂತೆಯೇ ಯುವ ನಾಯಕ ನಿರ್ವಹಿಸಿದ ಕರ್ತವ್ಯಗಳು ಆಂದೋಲನದ ಮೇಲೆ ನೇರ ಪ್ರಭಾವವನ್ನು ಬೀರಿ ಯಾವ ದಾರಿಯನ್ನು ಹಿಡಿಯುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯುವ ನಾಯಕನಾದವನು ತನ್ನ ಗುಂಪಿನ ಸದಸ್ಯರೊಡನೆ ಪ್ರತಿಕ್ರಿಯಾತ್ಮಕ ನಂಬಿಕೆಯ ಗಮನಪೂರ್ಣ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವರ ಭಾವನೆಗಳನ್ನು ಗ್ರಹಿಸಿ ಅವರ ಅಭಿಪ್ರಾಯಗಳನ್ನು ಪ್ರತಿನಿಧಿಸಬೇಕು. ಭಾವೋದ್ರೇಕಗಳಿಲ್ಲದೆ ಸದಸ್ಯರ ಸಮಸ್ಯೆಗಳನ್ನು ಮತ್ತು ಅವರ ಅಳಲನ್ನು ನಿವೇದಿಸಿಕೊಳ್ಳುವ ಮೂಲಕ ತನ್ನ ಗುಂಪಿನಿ ಸದಸ್ಯರೊಡನೆ ಭಾವನಾತ್ಮಕ ಹೊಂದಾಣಿಕೆಯನ್ನು ಆತ ಮಾಡಬೇಕು.

ಒಂದು ಗುರಿಯಿಂದ ಮತ್ತೊಂದು ನೇರ ಕ್ರಿಯೆಗೆ ಅವರನ್ನು ನಾಯಕ ಪ್ರೇರೇಪಿಸಬೇಕು. ಯುವ ನಾಯಕ ಗುರಿ ಸಾಧನೆಗೆ ಕಾರ್ಯ ವಿಧಾನಗಳನ್ನು ಸೂಚಿಸಬೇಕು. ಇವುಗಳು ತರಗತಿಗಳನ್ನು ಬಹಿಷ್ಕರಿಸುವ, ಮುಷ್ಕರ ಹೂಡುವ, ಘೇರಾವ್ ಮಾಡುವ, ರಸ್ತೆ ತಡೆ ಉಂಟು ಮಾಡುವ, ಪ್ರದರ್ಶನ ನಡೆಸುವ ಇತ್ಯಾದಿ ಪ್ರಕಾರಗಳಾಗಿವೆ.

ಇದರಿಂದ ಕಾನೂನಾತ್ಮಕ ಸಮಸ್ಯೆಗಳಾದರೂ ಕೂಡ, ಪ್ರಕರಣಗಳು ದಾಖಲಾದಾಗ, ದಸ್ತಗಿರಿಯಾದಾಗ ಹಾಗೂ ಹೋರಾಟಗಳಲ್ಲಿ ಹಿನ್ನಡೆ ಉಂಟಾದಾಗ ಯಾವುದೇ ಹಿಂಜರಿತನಕ್ಕೆ ಒಳಗಾಗದೇ ತಮ್ಮ ನಾಯಕತ್ವ ಗುಣದಿಂದ ಎಲ್ಲರನ್ನೂ ನಿರ್ದಿಷ್ಟ ಗುರಿಯೆಡೆಗೆ ಒಟ್ಟಿಗೆ ಕರೆದುಕೊಂಡು ಹೋಗುವ ಶಕ್ತಿಯನ್ನು, ಕಲೆಯನ್ನು ರೂಢಿಸಿಕೊಂಡಾಗ ಮಾತ್ರ ಯಾವುದೇ ಒಬ್ಬ ವ್ಯಕ್ತಿ ಯುವ ನಾಯಕನಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

# PSI QUESTION PAPER – 2020
## PAPER – II

**ಗರಿಷ್ಠ ಅಂಕಗಳು: 150** **ಸಮಯ: 90 ನಿ.**

**1. 1967 ರಲ್ಲಿ ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?**
(a) ನಾಕು ತಂತಿ
**(b) ಶ್ರೀ ರಾಮಾಯಣ ದರ್ಶನಂ**
(c) ಮೂಕಜ್ಜಿಯ ಕನಸುಗಳು
(d) ಭಾರತ ಸಿಂಧು ರಶ್ಮಿ

**2. ಮೋಪ್ಲಾ ಚಳುವಳಿಯು ನಡೆದಿದ್ದು**
**(a) ಕೇರಳ**
(b) ಪಶ್ಚಿಮ ಉತ್ತರ ಪ್ರದೇಶ
(c) ಬಂಗಾಳ
(d) ಬಾಂಬೆ ಪ್ರೆಸಿಡೆನ್ಸಿ

**3. ಈ ಕೆಳಗಿನವುಗಳಲ್ಲಿ ಯಾವುದು ಮೂಲಭೂತ ಹಕ್ಕಲ್ಲ?**
(a) ಸಮಾನತೆಯ ಹಕ್ಕು
(b) ಶೋಷಣೆಯ ವಿರುದ್ಧದ ಹಕ್ಕು
**(c) ಆಸ್ತಿಯ ಹಕ್ಕು**
(d) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

**4. ಕಳಿಂಗ ಪ್ರಶಸ್ತಿಯನ್ನು ಇದಕ್ಕಾಗಿ ಸ್ಥಾಪಿಸಲಾಗಿದೆ.**
(a) ಭಾರತದಲ್ಲಿ ವಯಸ್ಕ ಶಿಕ್ಷಣದ ಗಮನಾರ್ಹ ಕೊಡುಗೆಗೆ ಭಾರತ ವಯಸ್ಕ ಶಿಕ್ಷಣ ಸಂಸ್ಥೆ ನೀಡುವ ಪ್ರಶಸ್ತಿ
(b) ಜ್ಞಾನಪೀಠ ಸೃಜನಾತ್ಮಕ ಬರವಣಿಗೆಯನು ಜಯಪ್ರಿಯಗೊಳಿಸುವ ಸಂಸ್ಥೆ
**(c) ವಿಜ್ಞಾನವನ್ನು ಜನಪ್ರಿಯಗೊಳಿಸುವ ಸಾಧನೆಗೆ ಯುನೆಸ್ಕೋ ನೀಡುವ ಪ್ರಶಸ್ತಿ**
(d) ಇವುಗಳಲ್ಲಿ ಯಾವುದೂ ಅಲ್ಲ.

**5. ಪ್ರಪಂಚದ ಅತೀ ಕಿರಿಯ ವಯಸ್ಸಿನ ಪ್ರಧಾನ ಮಂತ್ರಿ**
**(a) ಸನ್ನಾ ಮೆರಿನ್**
(b) ಸೋಫಿಯಾ ವಿಲ್ನಾ
(c) ವಯೋರಿಕಾ ಡಿ
(d) ಮೆರ್ಸಿಡಿಸ್ ಆರೋಜ್

**6. ಒಂದು ಪಾರ್ಕಿಂಗ್ ಸ್ಥಳದಲ್ಲಿ ಎರಡು ರೀತಿಯ ವಾಹನಗಳಿವೆ. ದ್ವಿಚಕ್ರ ವಾಹನಗಳು, ನಾಲ್ಕು ಚಕ್ರದ ವಾಹನಗಳು. ಒಟ್ಟು ವಾಹನಗಳ ಸಂಖ್ಯೆ 200. ಎಲ್ಲಾ ವಾಹನಗಳ ಚಕ್ರಗಳ ಸಂಖ್ಯೆ 580. ಹಾಗಾದರೆ ಪಾರ್ಕಿಂಗ್ ಸ್ಥಳದಲ್ಲಿ ಇರುವ ನಾಲ್ಕು ಚಕ್ರಗಳ ವಾಹನದ ಸಂಖ್ಯೆ ಎಷ್ಟು?**
**(a) 110**
(b) 90
(c) 100
(d) 180

**7. ನೊಬೆಲ್ ಪ್ರಶಸ್ತಿ ಪಡೆದ ಭಾರತ ಮೂಲದ ಏಷ್ಯಾ ಖಂಡದ ಮೊದಲ ವ್ಯಕ್ತಿ ಯಾರು?**
(a) ಅಮರ್ತ್ಯಸೇನ್
**(b) ರವೀಂದ್ರನಾಥ ಟ್ಯಾಗೋರ್**
(c) ಮದರ್ ತೆರೆಸಾ
(d) ಕೈಲಾಶ್ ಸತ್ಯಾರ್ಥಿ

**8. ಪುಲಿಟ್ಜರ್ ಪ್ರಶಸ್ತಿಯನ್ನು ಈ ಕ್ಷೇತ್ರದ ಗಣನೀಯ ಸೇವೆಗಾಗಿ ನೀಡಲಾಗುವುದು.**
(a) ವಿಜ್ಞಾನ ಮತ್ತು ತಂತ್ರಜ್ಞಾನ
**(b) ಸಾಹಿತ್ಯ ಮತ್ತು ಪತ್ರಿಕೋದ್ಯಮ**
(c) ಪರಿಸರ ಕಾಳಜಿ
(d) ಅಂತರಾಷ್ಟ್ರೀಯ ತಿಳುವಳಿಕೆ

**9. ಹಿತ್ತಾಳೆಯು ಇದರ ಮಿಶ್ರಣ**
(a) ನಿಕ್ಕಲ್ ಮತ್ತು ತಾಮ್ರ
**(b) ತಾಮ್ರ ಮತ್ತು ಸತು**
(c) ನಿಕ್ಕಲ್ ಮತ್ತು ಸತು
(d) ನಿಕ್ಕಲ್ ಮತ್ತು ಬೆಳ್ಳಿ

**10. ಈ ಕೆಳಗಿನವುಗಳಲ್ಲಿ ಯಾವ ಜೀವಕೋಶದ ಅಂಗವು ದೇಹದ ಶಕ್ತಿ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ?**
(a) ಕ್ಲೋರೋಪ್ಲಾಸ್ಟ್
**(b) ಮೈಟೋಕಾಂಡ್ರಿಯಾ**
(c) ರೈಬೋಸೋಮ್
(d) ಗೋಲ್ಗಿ ಅಪಾರಟಸ್

**11. ಕೇಂದ್ರಿಯ ಆಹಾರ ತಂತ್ರಜ್ಞಾನ ಸಂಶೋಧನಾ ಕೇಂದ್ರ (CFTRI) ಎಲ್ಲಿದೆ?**
**(a) ಮೈಸೂರು**
(b) ಚೆನ್ನೈ
(c) ಹರಿದ್ವಾರ್
(d) ಗುವಹಾಟಿ

**12. ಈ ಕೆಳಗಿನವುಗಳನ್ನು ಕ್ರಮವಾಗಿ ಬರೆಯಿರಿ.**
1. ದಂಡಿ ಸತ್ಯಾಗ್ರಹ 2. ಸೈಮನ್ ಕಮಿಷನ್
3. ಪೂನಾ ಒಪ್ಪಂದ 4. ಗಾಂಧಿ–ಇರ್ವಿನ್ ಒಪ್ಪಂದ

(a) 2, 1, 3, 4
**(b) 2, 1, 4, 3**
(c) 4, 3, 1, 2
(d) 4, 3, 2, 1

**13. ವಿಜಯನಗರ ಸಾಮ್ರಾಜ್ಯದ ಅವಶೇಷಗಳನ್ನು ಇಲ್ಲಿ ನೋಡಬಹುದು.**
(a) ಬಿಜಾಪುರ
(b) ಗೋಲ್ಕೊಂಡ
**(c) ಹಂಪಿ**
(d) ಬರೋಡ

**14. ದಕ್ಷಿಣ ಭಾರತದ ನೀಲಗಿರಿ ಬೆಟ್ಟಗಳ ದಕ್ಷಿಣ ತುದಿಯು ಹಾದು ಹೋಗುವ ಭಾಗವನ್ನು ಈ ರೀತಿ ಕರೆಯುತ್ತಾರೆ.**
**(a) ಪಾಲ್‌ಘಾಟ್ ಗ್ಯಾಪ್**
(b) ತಾಲಘಾಟ್ ಗ್ಯಾಪ್
(c) ಬೋರ್‌ಘಾಟ್ ಪಾಸ್
(d) ದ ಬೋಲನ್ ಪಾಸ್

15. ವಿಧಾನ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆಯು ವಿಧಾನ ಸಭೆಯ ಸದಸ್ಯರ ಒಟ್ಟು ಎಷ್ಟು ಅನುಪಾನವನ್ನು ಮೀರುವಂತಿಲ್ಲ?

**(a) 1/3**
(b) 2/3
(c) 1/2
(d) 1/4

16. BCG ಲಸಿಕೆಯನ್ನು ಈ ಕೆಳಗಿನ ರೋಗದ ರಕ್ಷಣೆಗಾಗಿ ಹಾಕಲಾಗುವುದು.

(a) ಪೊಲಿಯೋ
(b) ಕಾಲರಾ
(c) ಸಿಡುಬು
**(d) ಟ್ಯೂಬರ್‌ಕ್ಯುಲೋಸಿಸ್**

17. ಬೇಲೂರು ಮತ್ತು ಹಳೇಬೀಡು ದೇವಾಲಯಗಳು ಯಾವ ರಾಜವಂಶಕ್ಕೆ ಸೇರಿದ್ದವಾಗಿದೆ?

**(a) ಹೊಯ್ಸಳ**
(b) ರಾಷ್ಟ್ರಕೂಟ
(c) ಬದಾಮಿ ಚಾಲುಕ್ಯ
(d) ಕದಂಬ

18. ಡಾ॥ ಬಿ. ಆರ್. ಅಂಬೇಡ್ಕರ್‌ರವರ ಪರಿನಿರ್ವಹಣಾ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

(a) ಡಿಸೆಂಬರ್ 12
**(b) ಡಿಸೆಂಬರ್ 6**
(c) ಡಿಸೆಂಬರ್ 4
(d) ಡಿಸೆಂಬರ್ 14

19. ನೀವು ಸರತಿ ಸಾಲಿನಲ್ಲಿ ಒಂದು ತುದಿಯಿಂದ 9 ನೇ ವ್ಯಕ್ತಿಯಾಗಿದ್ದು ಮತ್ತೊಂದು ತುದಿಯಿಂದ 11 ನೇ ವ್ಯಕ್ತಿಯಾಗಿದ್ದರೆ, ಸರತಿ ಸಾಲಿನಲ್ಲಿರುವ ಜನರ ಸಂಖ್ಯೆ ಎಷ್ಟು?

**(a) 19**
(b) 20
(c) 21
(d) 22

20. ದಿವಂಗತ ರಾಜಾ ರವಿವರ್ಮ ಇವರು ಯಾವ ಕ್ಷೇತ್ರದಲ್ಲಿ ಪ್ರಸಿದ್ಧರು?

(a) ರಾಜಕೀಯ
(b) ಇತಿಹಾಸ
**(c) ಚಿತ್ರಕಲೆ**
(d) ಇಂಜಿನಿಯರಿಂಗ್

21. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಸರಿಯಾದುದಲ್ಲ?

(a) ಲೋಕಮಾನ್ಯ – ಬಾಲಗಂಗಾಧರ್ ತಿಲಕ್
**(b) ಗಡಿನಾಡ ಗಾಂಧಿ– ಅಬ್ದುಲ್ ಕಲಾಂ ಆಜಾದ್**
(c) ನೇತಾಜಿ – ಸುಭಾಷ್ ಚಂದ್ರ ಬೋಸ್
(d) ದೇಶಬಂಧು – ಚಿತ್ತರಂಜನ್ ದಾಸ್

22. ಕಲಾಯಿ ಮಾಡಿದ ಕಬ್ಬಿಣದ ಹಾಳೆಯು ಇದರ ಲೇಪನವಾಗಿದೆ.

(a) ಟಿನ್ (ತವರ)
(b) ಲೆಡ್
**(c) ಜಿಂಕ್ (ಸತು)**
(d) ಕ್ರೋಮಿಯಂ

23. ಕೆಳಗಿನ ಯಾವ ವೇದವು ಸಂಗೀತಕ್ಕೆ ತನ್ನ ಬಳುವಳಿಯನ್ನು ನೀಡಿದೆ?

(a) ಋಗ್ವೇದ
**(b) ಸಾಮವೇದ**
(c) ಯಜುರ್ವೇದ
(d) ಅಥರ್ವ ವೇದ

24. ಕೋನಾರ್ಕ್ ದೇವಾಲಯ ಯಾವ ದೇವರಿಗೆ ಸಂಬಂಧಿಸಿದ್ದು?

(a) ವಿಷ್ಣು
(b) ಶಿವ
**(c) ಸೂರ್ಯ**
(d) ಗಣೇಶ

25. ಸಂವಿಧಾನದ 370 ನೇ ವಿಧಿಯು ಯಾವುದಕ್ಕೆ ಸಂಬಂಧಿಸಿದ್ದು?

(a) ಪಂಚಾಯತ್ ರಾಜ್
(b) ರಾಷ್ಟ್ರಪತಿಯ ಕ್ಷಮಾದಾನದ ಅಧಿಕಾರ
(c) ಹೊಸ ರಾಜ್ಯಗಳ ರಚನೆ ಹಾಗು ಗಡಿರೇಖೆಯ ಪುನಃರಚನೆ
**(d) ಜಮ್ಮು ಕಾಶ್ಮೀರಕ್ಕೆ ವಿಶೇಷ ದರ್ಜೆಗೆ ಸಂಬಂಧಿಸಿದ್ದು**

26. ಸಾರ್ಕ್‌ನ ಕೇಂದ್ರ ಕಛೇರಿ ಎಲ್ಲಿದೆ?

**(a) ಕಠ್ಮಂಡು**
(b) ನವದೆಹಲಿ
(c) ಢಾಕಾ
(d) ಇಸ್ಲಾಮಾಬಾದ್

27. ದಿನಾಂಕ 10 ಅಕ್ಟೋಬರ್, 2019 ರಂದು ಇಂಡೋ–ಮಂಗೋಲಿಯನ್ ಜಂಟಿ ಕಾರ್ಯಾಚರಣೆಯ ನ್ಯೂಮಾಡಿಕ್ ಎಲಿಫೆಂಟ್ 2019 ನ 14 ನೇ ಆವೃತ್ತಿಯನ್ನು ಎಲ್ಲಿ ಆಯೋಜಿಸಲಾಗಿತ್ತು?

(a) ಉತ್ತರಾಖಂಡ್
**(b) ಹಿಮಾಚಲ ಪ್ರದೇಶ**
(c) ಕೇರಳ
(d) ಕರ್ನಾಟಕ

28. ಸುಮಿತ್ ತರಗತಿಯಲ್ಲಿ ಮೇಲಿನಿಂದ 9 ನೇ ರ್‍ಯಾಂಕ್‌ನಲ್ಲಿದ್ದು ಮತ್ತು ಕೆಳಗಿನಿಂದ 38 ನೇ ಕ್ರಮಾಂಕದಲ್ಲಿದ್ದಾನೆ. ಹಾಗಾದರೆ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

(a) 45
**(b) 46**
(c) 47
(d) 48

29. ಸಂವಿಧಾನದ 17 ನೇ ವಿಧಿಯು

(a) ವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡುತ್ತದೆ.
(b) ಸಮಾನತೆಯ ಹಕ್ಕನ್ನು ನೀಡುತ್ತದೆ.
**(c) ಅಸ್ಪೃಶ್ಯತೆಯನ್ನು ನಿವಾರಣೆ ಮಾಡುತ್ತದೆ.**
(d) ಸಂವಿಧಾನಾತ್ಮಕ ಪರಿಹಾರದ ಹಕ್ಕು ನೀಡುತ್ತದೆ.

30. ಆಘಾಖಾನ್ ಕಪ್ ಯಾವ ಕ್ರೀಡೆಗೆ ಸಂಬಂಧಿಸಿದ್ದು.

**(a) ಪುಟ್‌ಬಾಲ್**
(b) ಕ್ರಿಕೇಟ್
(c) ಬ್ಯಾಸ್ಕೆಟ್ ಬಾಲ್
(d) ಬ್ಯಾಡ್ಮಿಂಟನ್

**31. "ಬಾರ್" ಇದರ ಅಳತೆ ಘಟಕವಾಗಿದೆ.**

(a) ಉಷ್ಣತೆ
(b) ವಿದ್ಯುತ್
**(c) ವಾಯುಭಾರ**
(d) ತಾಪಮಾನ

**32. ಮೋಡಕ್ಕೆ ಉಪ್ಪನ್ನು ಬಿತ್ತುವ ಮೂಲಕ ಕೃತಕ ಮಳೆಯನ್ನು ಸುರಿಸಲಾಗುವುದು. ಇದರಲ್ಲಿ ಬಳಸುವ ಉಪ್ಪು.**

(a) ಸಿಲ್ವರ್ ಕ್ಲೋರೈಡ್
(b) ಸಿಲ್ವರ್ ಬ್ರೊಮೈಡ್
**(c) ಸಿಲ್ವರ್ ಐಯೋಡೈಡ್**
(d) ಕಾರ್ಬನ್ ಡೈ ಆಕ್ಸೈಡ್

**33. A, C, F, H, ?, M**

(a) J
**(b) K**
(c) L
(d) O

**34. ಭಾರತ ರತ್ನ ಪ್ರಶಸ್ತಿಯನ್ನು ಸ್ವೀಕರಿಸಿದ ಕರ್ನಾಟಕದ ಮೊದಲ ವ್ಯಕ್ತಿ ಯಾರು?**

(a) ಗಿರೀಶ್ ಕಾರ್ನಾಡ್
(b) ಸಿ.ಎನ್.ಆರ್. ರಾವ್
(c) ಭೀಮಸೇನ್ ಜೋಶಿ
**(d) ವಿಶ್ವೇಶ್ವರಯ್ಯ**

**35. ಜೈ ಜವಾನ್ ಜೈ ಕಿಸಾನ್ ಎಂಬ ಘೋಷಣೆಯನ್ನು ಮೊಳಗಿಸಿದವರು**

(a) ಮಹಾತ್ಮ ಗಾಂಧಿ
(b) ಜವಾಹರ್‌ಲಾಲ್ ನೆಹರು
**(c) ಲಾಲ್ ಬಹಾದ್ದೂರ್ ಶಾಸ್ತ್ರಿ**
(d) ಸರ್ದಾರ್ ಪಟೇಲ್

**36. ಭಾರತ ಮತ್ತು ಪಾಕಿಸ್ತಾನದ ಗಡಿರೇಖೆಯನ್ನು ನಿರ್ಧರಿಸುವುದು.**

(a) ಮ್ಯಾಕ್‌ಮೋಹನ ರೇಖೆ
**(b) ರ್‍ಯಾಡ್‌ಕ್ಲಿಫ್ ರೇಖೆ**
(c) ಡುರಾಂಡ್ ರೇಖೆ
(d) ಮ್ಯಾಗ್‌ನಾಟ್ ರೇಖೆ

**37. ರಕ್ತ ಹೆಪ್ಪುಗಟ್ಟಲು ಈ ಕೆಳಗಿನ ಯಾವ ಅಂಶ ಮುಖ್ಯ?**

(a) ಕೆಂಪು ರಕ್ತ ಕಣ
(b) ಬಿಳಿ ರಕ್ತ ಕಣ
**(c) ಬ್ಲಡ್ ಪ್ಲೇಟ್‌ಲೆಟ್ಸ್**
(d) ಲಿಂಫ್

**38. ಕನ್ನಡದ ಧ್ವಜದಲ್ಲಿ ಈ ಕೆಳಗಿನ ಯಾವ ಎರಡು ಬಣ್ಣಗಳನ್ನು ಬಳಸಲಾಗಿದೆ?**

**(a) ಹಳದಿ ಮತ್ತು ಕೆಂಪು**
(b) ಕೆಂಪು ಮತ್ತು ಬಿಳಿ
(c) ಹಸಿರು ಮತ್ತು ಕಪ್ಪು
(d) ಹಳದಿ ಮತ್ತು ಬಿಳಿ

**39. ಬೆಳಕಿನ ಸರಾಸರಿ ವೇಗ:**

(a) $3 \times 10^6$ m/sec
**(b) $3 \times 10^8$ m/sec**
(c) $3 \times 10^{10}$ m/sec
(d) $3 \times 10^{12}$ m/sec

**40. ಪ್ರಪಂಚದಾದ್ಯಂತ ಸೆಪ್ಟೆಂಬರ್ 8, 2019 ರಂದು ಆಚರಿಸಿದ ಅಂತರಾಷ್ಟ್ರೀಯ ಸಾಕ್ಷರತಾ ದಿನದ ಮುಖ್ಯ ವಿಷಯ ಯಾವುದು?**

**(a) ಸಾಕ್ಷರತೆ ಮತ್ತು ಬಹುಬಾಷಿತ್ವ**
(b) ಎಲ್ಲರಿಗಾಗಿ ಶಿಕ್ಷಣ
(c) ವಿಶ್ವಶಾಂತಿಗಾಗಿ ಶಿಕ್ಷಣ
(d) ಸಾರ್ವತ್ರಿಕ ಶಿಕ್ಷಣ

**41. ಹೊಂದಿಸಿ ಬರೆಯಿರಿ**

| | ರಾಜಧಾನಿ | | ರಾಜವಂಶ |
|---|---|---|---|
| (a) | ಬದಾಮಿ | (1) | ರಾಷ್ಟ್ರಕೂಟ |
| (b) | ದ್ವಾರಸಮುದ್ರ | (2) | ಕಾಕತೀಯ |
| (c) | ವಾರಂಗಲ್ | (3) | ಹೊಯ್ಸಳ |
| (d) | ಮಾನ್ಯಖೇಟ | (4) | ಚಾಲುಕ್ಯ |

| | A | B | C | D |
|---|---|---|---|---|
| (a) | 2 | 3 | 4 | 1 |
| (b) | 3 | 1 | 2 | 4 |
| (c) | 4 | 2 | 1 | 3 |
| **(d)** | **4** | **3** | **2** | **1** |

**42. ಲೋಕಸಭೆ ಮತ್ತು ರಾಜ್ಯಸಭೆಯ ಗರಿಷ್ಠ ಬಲವು ಕ್ರಮವಾಗಿ**

(a) 500 ಮತ್ತು 250
(b) 525 ಮತ್ತು 238
(c) 537 ಮತ್ತು 275
**(d) 545 ಮತ್ತು 250**

**43. ರಣಜಿ ಟ್ರೋಫಿಯು ಯಾವ ಕ್ರೀಡೆಗೆ ಸಂಬಂಧಿಸಿದ್ದು**

(a) ಹಾಕಿ
(b) ಫುಟ್‌ಬಾಲ್
**(c) ಕ್ರಿಕೆಟ್**
(d) ಇವುಗಳಲ್ಲಿ ಯಾವುದೂ ಅಲ್ಲ

**44. ಪ್ರಸಿದ್ಧ ಪುಸ್ತಕ ಡಿಸ್ಕವರಿ ಆಫ್ ಇಂಡಿಯಾದ ಕರ್ತೃ**

(a) ಸುಭಾಷ್ ಚಂದ್ರ ಬೋಸ್
(b) ಲಾಲಾ ಲಜಪತ್‌ರಾಯ್
**(c) ಜವಹರ್‌ಲಾಲ್ ನೆಹರು**
(d) ಇವುಗಳಲ್ಲಿ ಯಾವುದೂ ಅಲ್ಲ.

**45. ದಿನಾಂಕ 22 ರ ಸೆಪ್ಟೆಂಬರ್‌ರಂದು "ಹೌಡಿ ಮೋದಿ" ಎಂಬ ಕಾರ್ಯಕ್ರಮವು ಅಮೇರಿಕಾದ ಯಾವ ನಗರದಲ್ಲಿ ಆಯೋಜನೆಗೊಂಡಿತ್ತು?**

**(a) ಹೌಸ್ಟನ್**
(b) ನ್ಯೂಯಾರ್ಕ್
(c) ಲಾಸ್ ಎಂಜಲೀಸ್
(d) ಚಿಕಾಗೋ

**46. ಆರ್ಯ ಸಮಾಜವನ್ನು ಪ್ರಾರಂಭಿಸಿದವರು ಯಾರು?**

(a) ರಾಜಾ ರಾಮ್ ಮೋಹನ್ ರಾಯ್
**(b) ಸ್ವಾಮಿ ದಯಾನಂದ ಸರಸ್ವತಿ**
(c) ಸ್ವಾಮಿ ವಿವೇಕಾನಂದ
(d) ಗೋಪಾಲಕೃಷ್ಣ ಗೋಖಲೆ

**47. ABSTPQ ರವರು ಒಂದು ಸಾಲಿನಲ್ಲಿ ಕುಳಿತಿದ್ದಾರೆ. P ಮತ್ತು Q ರವರು ಮಧ್ಯದಲ್ಲಿದ್ದರೆ, A ಮತ್ತು T ಕೊನೆಯಲ್ಲಿ ಕುಳಿತಿದ್ದು, B ಯು A ನ ಬಲಭಾಗಕ್ಕೆ ಕುಳಿತಿದ್ದರೆ, T ನ ಎಡಭಾಗದಲ್ಲಿ ಯಾರಿದ್ದಾರೆ?**

(a) P
(b) B
**(c) S**
(d) Q

**48. ಈ ಕೆಳಗಿನವುಗಳಲ್ಲಿ ಭಾರತದ ರಾಷ್ಟ್ರಗೀತೆ ಯಾವುದು?**

(a) ಸಾರೆ ಜಹಾನ್ ಸೆ ಅಚ್ಚಾ ಹಿಂದೂಸ್ಥಾನ್ ಹಮಾರಾ
**(b) ಜನ ಗಣ ಮನ**
(c) ವಂದೇ ಮಾತರಂ
(d) ಜಂಡಾ ಊಂಚಾ ರಹೇ ಹಮಾರಾ

**49. ವಜ್ರವು ಈ ಕೆಳಗಿನ ಯಾವುದರ ಭಿನ್ನ ರೂಪ?**

(a) ಸಿಲಿಕಾನ್
**(b) ಇಂಗಾಲ**
(c) ಸಲ್ಫರ್
(d) ಜರ್ಮೇನಿಯಂ

**50. ಸಸ್ಯಗಳಿಗೆ ಆಹಾರವು ಈ ಮೂಲಕ ಸರಬರಾಜಾಗುತ್ತದೆ.**

(a) ಕಾರ್ಟೆಕ್ಸ್
(b) ಎಪಿಡರ್ಮಿಸ್
(c) ಕ್ಸೈಲಮ್
**(d) ಫ್ಲೋಯಮ್**

**51. ಬಿಜಾಪುರದ ಆಲಮಟ್ಟಿ ಜಲಾಶಯವನ್ನು ಹೀಗೂ ಕರೆಯುತ್ತಾರೆ.**

(a) ಇಂದಿರಾ ಗಾಂಧಿ ಜಲಾಶಯ
(b) ರಾಜೀವ್ ಗಾಂಧಿ ಜಲಾಶಯ
**(c) ಲಾಲ್ ಬಹಾದ್ದೂರ ಶಾಸ್ತ್ರಿ ಜಲಾಶಯ**
(d) ಮಹಾತ್ಮ ಗಾಂಧಿ ಜಲಾಶಯ

**52. 1, 6, 13, 22, 33**

(a) 43
(b) 44
(c) 45
**(d) 46**

**53. ಇವುಗಳನ್ನು ಹೊಂದಿಸಿ:**

| | **ರಾಜಧಾನಿ** | | **ರಾಜವಂಶ** |
|---|---|---|---|
| (a) | ಪಲ್ಲವರು | (1) | ದಂತಿದುರ್ಗ |
| (b) | ಚಾಲುಕ್ಯರು | (2) | ವಿಷ್ಣುವರ್ಧನ |
| (c) | ರಾಷ್ಟ್ರಕೂಟರು | (3) | ಸಿಂಹವಿಷ್ಣು |
| (d) | ಹೊಯ್ಸಳರು | (4) | ಒಂದನೇ ಪುಲಕೇಶಿ |

| | A | B | C | D |
|---|---|---|---|---|
| (a) | 2 | 1 | 4 | 3 |
| **(b)** | **3** | **4** | **1** | **2** |
| (c) | 1 | 4 | 2 | 3 |
| (d) | 4 | 3 | 2 | 1 |

**54. ಕರ್ನಾಟಕದ ಲೋಕಸಭಾ ಸದಸ್ಯರ ಸಂಖ್ಯೆ.**

(a) 26
**(b) 28**
(c) 30
(d) 32

**55. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಕಲಾವಿದರು ಮತ್ತು ಅವರ ಪರಿಕರಗಳೊಂದಿಗೆ ಸರಿಯಾಗಿ ಹೊಂದಾಣಿಕೆ ಆಗುವುದಿಲ್ಲ?**

(a) ಜಾಕಿರ್ ಹುಸೇನ್ – ತಬಲ
(b) ಶಿವಕುಮಾರ್ ಶರ್ಮ – ಸಂತೂರ್
**(c) ಬಿಸ್ಮಿಲ್ಲಾಖಾನ್ – ಸಿತಾರ್**
(d) ಹರಿಪ್ರಸಾದ್ ಚೌರಾಸಿಯ – ಕೊಳಲು

**56. ಹಿಮೋಗ್ಲೋಬಿನ್ ನಲ್ಲಿರುವುದು**

**(a) ಕಬ್ಬಿಣ**
(b) ಮ್ಯಾಗ್ನೇಷಿಯಂ
(c) ಕ್ಯಾಲ್ಸಿಯಂ
(d) ಕ್ಲೋರಿನ್

**57. ಸಂಸ್ಕಾರ ಮತ್ತು ಅವಸ್ಥೆ ಎಂಬ ಕಾದಂಬರಿಯ ಕರ್ತೃ ಯಾರು?**

(a) ಮಾಸ್ತಿ ವೆಂಕಟೇಶ ಅಯ್ಯಂಗಾರ್
(b) ಶಿವರಾಮ ಕಾರಂತ
(c) ಕುವೆಂಪು
**(d) ಯು.ಆರ್. ಅನಂತಮೂರ್ತಿ**

**58. ಅಕ್ಟೋಬರ್ 10, 2019 ರಂದು ಪ್ರಧಾನಮಂತ್ರಿಗಳ 14 ದಿನಗಳ ವಿನೂತನ ಕಲಿಕಾ ಕಾರ್ಯಕ್ರಮವನ್ನು ಬೆಂಗಳೂರಿನ ಇಸ್ರೋ ಕೇಂದ್ರದಲ್ಲಿ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮ ಯಾವುದು?**

(a) ಲಕ್ಷ್ಯ
(b) ಗಗನ್
(c) ಉನ್ನತ್
**(d) ಧ್ರುವ್**

**59. "ಗ್ರ್ಯಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ" ಎಂದು ಹೆಸರಾದವರು.**

(a) ಖಾನ್ ಅಬ್ದುಲ್ ಗಫರ್‌ಖಾನ್
**(b) ದಾದಾಬಾಯ್ ನವರೋಜಿ**
(c) ಲಾಲಾ ಲಜಪತ್‌ರಾಯ್
(d) ಸಿ. ರಾಜಗೋಪಾಲಾಚಾರಿ

**60. ಅಕ್ರಮ ಬಂಧನದ ವಿರುದ್ಧ ನ್ಯಾಯಾಲಯ ಹೊರಡಿಸುವ ಅರ್ಜಿಯು ಈ ಕೆಳಗಿನವುಗಲ್ಲಿ ಯಾವುದು?**

(a) ಮ್ಯಾಂಡಮಸ್
**(b) ಹೇಬಿಯಸ್ ಕಾರ್ಪಸ್**
(c) ಸರ್‌ಷ್ಯೋರರಿ
(d) ಕ್ಯೊ ವಾರೆಂಟೋ

**61. ಭಾರತದ ಜಲಪ್ರದೇಶದ ಗಡಿಯು ಎಷ್ಟು ನಾಟಿಕಲ್ ಮೈಲುಗಳವರೆಗೆ ವಿಸ್ತರಿಸಿದೆ?**

(a) 8
**(b) 12**
(c) 18
(d) 22

62. ಮೋಹಿನಿಯಟ್ಟಂ ಎಂಬ ನೃತ್ಯ ಪ್ರಕಾರವು ಯಾವ ರಾಜ್ಯದ ಮೂಲವಾಗಿದೆ?
(a) ಕರ್ನಾಟಕ
**(b) ಕೇರಳ**
(c) ಒರಿಸ್ಸಾ
(d) ತಮಿಳುನಾಡು

63. ಈ ಕೆಳಗಿನವುಗಳಲ್ಲಿ ಯಾವುದು ವಾಶಿಂಗ್ ಸೋಡದ ಸಾಮಾನ್ಯ ಹೆಸರು?
**(a) ಕ್ಯಾಲ್ಸಿಯಂ ಕಾರ್ಬೋನೇಟ್**
(b) ಕ್ಯಾಲ್ಸಿಯಂ ಬೈ ಕಾರ್ಬೋನೇಟ್
(c) ಸೋಡಿಯಂ ಕಾರ್ಬೋನೇಟ್
(d) ಸೋಡಿಯಂ ಬೈ ಕಾರ್ಬೋನೇಟ್

64. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನವು ಯಾರ ಅಧ್ಯಕ್ಷತೆಯಲ್ಲಿ ನಡೆಯಿತು?
(a) ಬಿ. ಮಲಬಾರಿ
(b) ಎ. ಓ. ಹ್ಯೂಮ್
(c) ಬದ್ರುದ್ದೀನ್ ತೈಯಬ್‌ಜೀ
**(d) ಡಬ್ಲ್ಯೂ. ಸಿ. ಬ್ಯಾನರ್ಜಿ**

65. ಕೆಂಪು, ಹಸಿರು, ನೀಲಿ ಬಣ್ಣದ ಮೂರು ಡಬ್ಬಗಳಲ್ಲಿ 108 ಚೆಂಡುಗಳಿವೆ. ನೀಲಿ ಬಣ್ಣದ ಡಬ್ಬದಲ್ಲಿ ಇರುವುದಕ್ಕಿಂತ ಎರಡು ಪಟ್ಟು ಹೆಚ್ಚಿನ ಚೆಂಡುಗಳು ಹಸಿರು ಮತ್ತು ಕೆಂಪು ಡಬ್ಬಗಳಲ್ಲಿ ಇವೆ. ಮತ್ತು ಕೆಂಪು ಬಣ್ಣದ ಡಬ್ಬದಲ್ಲಿ ನೀಲಿ ಬಣ್ಣದ ಡಬ್ಬಕ್ಕಿಂತ ಎರಡು ಪಟ್ಟು ಹೆಚ್ಚು ಚೆಂಡುಗಳಿವೆ. ಹಾಗಾದರೆ ಹಸಿರು ಬಣ್ಣದ ಡಬ್ಬದಲ್ಲಿ ಎಷ್ಟು ಚೆಂಡುಗಳಿವೆ?
(a) 18
(b) 36
(c) 45
(d) 8

66. ಮೆಟ್ಟೂರು ಆಣೆಕಟ್ಟನ್ನು ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ?
(a) ನರ್ಮದಾ
(b) ಕೃಷ್ಣಾ
**(c) ಕಾವೇರಿ**
(d) ಮಹಾನದಿ

67. ಯಾವ ದಿನವನ್ನು ಕರ್ನಾಟಕ ರಾಜ್ಯೋತ್ಸವ ದಿನವನ್ನಾಗಿ ಆಚರಿಸಲಾಗುತ್ತದೆ?
(a) ಅಕ್ಟೋಬರ್ 1
(b) ಅಕ್ಟೋಬರ್ 16
**(c) ನವೆಂಬರ್ 1**
(d) ನವೆಂಬರ್ 3

68. ಒಂದು ಹಡಗು ಪಶ್ಚಿಮದಿಂದ ಪೂರ್ವಕ್ಕೆ ತನ್ನ ಅಂತರಾಷ್ಟ್ರೀಯ ದಿನಾಂಕ ರೇಖೆಯನ್ನು ದಾಟಿದಾಗ
**(a) ಒಂದು ದಿನವನ್ನು ಕಳೆದುಕೊಳ್ಳುತ್ತದೆ.**
(b) ಒಂದು ದಿನವನ್ನು ಗಳಿಸುತ್ತದೆ.
(c) ಅರ್ಧ ದಿನವನ್ನು ಕಳೆದುಕೊಳ್ಳುತ್ತದೆ.
(d) ಅರ್ಧ ದಿನವನ್ನು ಗಳಿಸುತ್ತದೆ.

69. ಸೆಪ್ಟಂಬರ್ 9, 2019 ರಂದು ರಾಮನ್ ಮ್ಯಾಗ್ಸೆಸೆ ಅವಾರ್ಡ್ 2019 ಅನ್ನು ಸ್ವೀಕರಿಸಿದವರು ಯಾರು?
(a) ಸಂಜಯ್ ಚತುರ್ವೇದಿ
**(b) ರವೀಶ್‌ಕುಮಾರ್**
(c) ಕಿರಣ್ ಬೇಡಿ
(d) ಟಿ. ಎನ್. ಶೇಷನ್

70. ರಾಮದೇವರಬೆಟ್ಟ ರಣಹದ್ದುಗಳ ಪಕ್ಷಿಧಾಮ, ಎಲ್ಲಿದೆ?
**(a) ರಾಮನಗರ**
(b) ತುಮಕೂರು
(c) ಕೋಲಾರ
(d) ಕೆ.ಜಿ.ಎಫ್.

71. ಲೋಕಸಭೆಯ ಸಚಿವಾಲಯವು ನೇರವಾಗಿ ಯಾವ ಉಸ್ತುವಾರಿಗೆ ಬರುತ್ತದೆ?
(a) ಗೃಹ ಸಚಿವಾಲಯ
(b) ಸಂಸದೀಯ ವ್ಯವಹಾರ ಸಚಿವಾಲಯ
**(c) ಲೋಕಸಭೆಯ ಸ್ಪೀಕರ್**
(d) ಲೋಕಸಭೆಯ ಸ್ಪೀಕರ್

72. ವಿಂಬಲ್ಡನ್ ಚಾಂಪಿಯನ್‌ಶಿಪ್ ಆಟವನ್ನು ಎಲ್ಲಿ ಆಡಲಾಗುತ್ತದೆ?
(a) ಫ್ರಾನ್ಸ್
**(b) ಯು.ಕೆ**
(c) ಸ್ವೀಡನ್
(d) ಆಸ್ಟ್ರೇಲಿಯಾ

73. ಈ ಕೆಳಕಂಡ ಯಾವ ಉಪಕರಣದಿಂದ ಗಾಳಿಯ ಆದ್ರತೆಯನ್ನು ಅಳೆಯುತ್ತಾರೆ?
(a) ಹೈಡ್ರೋಮೀಟರ್
(b) ಎಪಿಸೋಮೀಟರ್
**(c) ಹೈಗ್ರೋಮೀಟರ್**
(d) ಬಾರೋಮೀಟರ್

74. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಯಾವ ಅಧಿವೇಶನದಲ್ಲಿ ತೀವ್ರಗಾಮಿ ಮತ್ತು ಮಂದಗಾಮಿಗಳ ನಡುವೆ ವಿಭಜನೆ ಏರ್ಪಟ್ಟಿತ್ತು?
(a) ಕಲ್ಕತ್ತಾ
(b) ಲಾಹೋರ್
(c) ಬಾಂಬೆ
**(d) ಸೂರತ್**

75. A ಮತ್ತು B ಸಹೋದರರು, C ಮತ್ತು D ಸಹೋದರಿಯರು. A ನ ಮಗನು D ನ ಸಹೋದರನು. ಹಾಗಾದರೆ C ಯೊಂದಿಗೆ B ಯಾವ ಸಂಬಂಧವನ್ನು ಹೊಂದಿದ್ದಾನೆ?
(a) ತಂದೆ
(b) ಸಹೋದರ
(c) ತಾತ
**(d) ಚಿಕ್ಕಪ್ಪ**

76. ಕರ್ನಾಟಕದ ನಾಡಗೀತೆಯಾದ "ಜಯ ಭಾರತ ಜನನಿಯ ತನುಜಾತೆ" ಯ ರಚನಾಕಾರರು ಯಾರು?
(a) ಗೋಪಾಲಕೃಷ್ಣ ಅಡಿಗ
**(b) ಕುವೆಂಪು**
(c) ಕೆ. ಶಿವರಾಮ ಕಾರಂತ
(d) ಗೋವಿಂದರಾಯ್ ನಾಯಕ್

**77. ಒಬ್ಬ ವ್ಯಕ್ತಿಯ ಕಣ್ಣಿನಲ್ಲಿ ನಿರ್ದಿಷ್ಟ ವರ್ಣದ್ರವ್ಯವು ಯಾವ ಭಾಗದಲ್ಲಿ ಇರುವ ಕಾರಣ ಕಣ್ಣು ಕಂದು ಬಣ್ಣವಾಗಿ, ನೀಲಿ ಬಣ್ಣವಾಗಿ ಅಥವಾ ಕಪ್ಪು ಬಣ್ಣವಾಗಿ ಕಾಣುತ್ತದೆ?**

(a) ಪ್ಯೂಪಿಲ್
**(b) ಐರಿಸ್**
(c) ಕಾರ್ನಿಯಾ
(d) ಕೊರೈಡ್

**78. ಕೃಷ್ಣದೇವರಾಯನು ಬಾಲಕೃಷ್ಣ ದೇವಾಲಯವನ್ನು ಯಾವ ರಾಜ್ಯದ ವಿಜಯದ ಸ್ಮರಣೆಯಾಗಿ ಕಟ್ಟಿಸಿದನು?**

**(a) ಒರಿಸ್ಸಾ**
(b) ಕೇರಳ
(c) ಗೋವಾ
(d) ಬಿಜಾಪುರ

**79. ಈ ಕೆಳಕಂಡ ಯಾವ ಸಂಸ್ಥೆಯು ಉತ್ಕರ್ಷ–2022 ಮಧ್ಯಮ ಅವಧಿಯ ಕಾರ್ಯತಂತ್ರದ ಚೌಕಟ್ಟು ಎಂಬ ಕಾರ್ಯಕ್ರಮಕ್ಕೆ ಸಹಭಾಗಿತ್ವವನ್ನು ಹೊಂದಿದೆ?**

**(a) ಆರ್.ಬಿ.ಐ.**
(b) ನೀತಿ ಆಯೋಗ
(c) ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು
(d) ಯು.ಜಿ.ಸಿ.

**80. ದೆಹಲಿಯಲ್ಲಿರುವ ಯಾವ ಸಮಾಧಿಯನ್ನು ವಿಜಯಘಾಟ್ ಎಂದು ಕರೆಯುತ್ತಾರೆ?**

(a) ರಾಜೀವ್ ಗಾಂಧಿ
(b) ಜಗಜೀವನ್ ರಾಮ್
(c) ಜವಹರ್‌ಲಾಲ್ ನೆಹರು
**(d) ಲಾಲ್ ಬಹಾದ್ದೂರ್ ಶಾಸ್ತ್ರೀ**

**81. ಯಾವ ಕಾರಣದಿಂದ ಭಾರತವು ಪ್ರತಿ ವರ್ಷ ಫೆಬ್ರುವರಿ 28 ನ್ನು ರಾಷ್ಟ್ರೀಯ ವಿಜ್ಞಾನ ದಿನ ಎಂದು ಆಚರಣೆ ಮಾಡುತ್ತದೆ?**

**(a) 1928 ರಲ್ಲಿ ಸಿ.ವಿ. ರಾಮನ್‌ರವರು ರಾಮನ್ ಎಫೆಕ್ಟ್ ಅನ್ನು ಕಂಡು ಹಿಡಿದ ದಿನವಾದ್ದರಿಂದ**
(b) ಭಾರತವು ಮೊದಲ ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಿದ ದಿನವಾದ್ದರಿಂದ
(c) ವಿಕ್ರಮ್ಮ ಸಾರಾಬಾಯಿ ಹುಟ್ಟಿದ ದಿನವಾದ್ದರಿಂದ
(d) ನೆಹರುರವರು ಭಾರತದಾದ್ಯಂತ ವಿಜ್ಞಾನ ಪ್ರಯೋಗಾಲಯಗಳಿಗೆ ಅಡಿಗಲ್ಲು ಹಾಕಿದ್ದರಿಂದ

**82. ಕಬ್ಬಿಣದ ಶುದ್ಧ ರೂಪವು**

(a) ಸ್ಟೀಲ್
(b) ಕಾಸ್ಟ್ ಐರನ್
(c) ಪಿಗ್ ಐರನ್
**(d) ವ್ರೋಟ್ ಐರನ್**

**83. ಯಾವ ಕಾಯ್ದೆಯ ಪ್ರಕಾರ ಗವರ್ನರ್ ಜನರಲ್ ಆಫ್ ಬೆಂಗಾಲ್ ಎಂಬುದು ಗವರ್ನರ್ ಜನರಲ್ ಆಫ್ ಇಂಡಿಯಾ ಎಂದು ಬದಲಾಗಿದೆ?**

(a) 1805
(b) 1829
**(c) 1833**
(d) 1853

**84. ನೀವು ಉತ್ತರಕ್ಕೆ ಹೋಗಿ, ಬಲಕ್ಕೆ ತಿರುಗಿ, ಪುನಃ ಬಲಕ್ಕೆ ತಿರುಗಿ ನಂತರ ಎಡಕ್ಕೆ ಹೋದರೆ ನೀವು ಈಗ ಯಾವ ದಿಕ್ಕಿನಲ್ಲಿ ಇರುವಿರಿ?**

(a) ಉತ್ತರ
(b) ದಕ್ಷಿಣ
**(c) ಪೂರ್ವ**
(d) ಪಶ್ಚಿಮ

**85. ಭಾರತದ ಸಮಭಾಜಕ ವೃತ್ತವು ನಾಲ್ಕು ರಾಜ್ಯಗಳ ನಡುವೆ ಹಾದು ಹೋದರೆ ಅವುಗಳಲ್ಲಿ ಎರಡು ರಾಜ್ಯಗಳು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ. ಉಳಿದ ಎರಡು ರಾಜ್ಯಗಳು.**

(a) ಆಂಧ್ರಪ್ರದೇಶ ಮತ್ತು ಕರ್ನಾಟಕ
**(b) ಒರಿಸ್ಸಾ ಮತ್ತು ಆಂಧ್ರಪ್ರದೇಶ**
(c) ಕರ್ನಾಟಕ ಮತ್ತು ತಮಿಳುನಾಡು
(d) ಆಂಧ್ರಪ್ರದೇಶ ಮತ್ತು ತಮಿಳುನಾಡು

**86. ಭಾರತದ ಚುನಾವಣಾ ಆಯೋಗವು ಈ ಕೆಳಗಿನ ಯಾವುದಕ್ಕೆ ಚುನಾವಣೆ ನಡೆಸುವುದಿಲ್ಲ?**

(a) ಲೋಕಸಭೆ
(b) ರಾಜ್ಯಸಭೆ
**(c) ಸ್ಥಳೀಯ ಚುನಾವಣೆ**
(d) ರಾಷ್ಟ್ರಪತಿ ಚುನಾವಣೆ

**87. ನೀರಿನ ಗರಿಷ್ಟ ಸಾಂದ್ರತೆ**

(a) -1°C
(b) 0° C
**(c) 4° C**
(d) 100° C

**88. ಇದು ಮೊಟ್ಟೆಯನ್ನಿಡುವ ಸಸ್ತನಿ**

**(a) ಬಾವಲಿ**
(b) ಕಾಂಗರೂ
(c) ಡಕ್‌ಬಿಲ್ಲಡ್ ಪ್ಲಾಟಿಪಸ್
(d) ಅಳಿಲು

**89. ಮಹಾನ್ ಸಂಸ್ಕೃತಿ ಕವಿ ಕಾಳಿದಾಸನ ಈ ಕೆಳಗಿನ ರಾಜನ ಆಸ್ಥಾನದ ಸದಸ್ಯನಾಗಿದ್ದನು?**

(a) 2 ನೇ ಚಂದ್ರಗುಪ್ತ (ವಿಕ್ರಮಾದಿತ್ಯ)
**(b) ಅಶೋಕ**
(c) ಹರ್ಷ
(d) ಸಮುದ್ರಗುಪ್ತ

**90. ಇತ್ತೀಚೆಗೆ ಯಾವ ರಾಜ್ಯ ಸರ್ಕಾರವು "ಮೋ ಸರ್ಕಾರ್" ಎಂಬ ಆಡಳಿತ ಪದ್ಧತಿ ಜಾರಿಗೆ ತಂದಿದೆ?**

(a) ಗುಜರಾತ್
(b) ಒರಿಸ್ಸಾ
**(c) ಪಶ್ಚಿಮ ಬಂಗಾಳ**
(d) ಮಹಾರಾಷ್ಟ್ರ

**91. ಹೊಂದಿಸಿ ಬರೆಯಿರಿ.**

| | | | |
|---|---|---|---|
| (a) | ನಾಮದೇವ | (1) | ಪಶ್ಚಿಮ ಬಂಗಾಳ |
| (b) | ಚೈತನ್ಯ | (2) | ಉತ್ತರ ಪ್ರದೇಶ |
| (c) | ಸೂರದಾಸ್ | (3) | ಮಹಾರಾಷ್ಟ್ರ |
| (d) | ನಾನಕ್ | (4) | ಪಂಜಾಬ್ |

| | A | B | C | D |
|---|---|---|---|---|
| (a) | 1 | 4 | 3 | 2 |
| (b) | 2 | 3 | 4 | 1 |
| **(c)** | **3** | **1** | **2** | **4** |
| (d) | 4 | 2 | 1 | 3 |

**92. ರಾಜ್ಯಸಭೆಯ ಸದಸ್ಯನಾಗಲು ಅಭ್ಯರ್ಥಿಗೆ ಬೇಕಾದ ಕನಿಷ್ಠ ವಯಸ್ಸು.**

(a) 21 ವರ್ಷಗಳು
(b) 25 ವರ್ಷಗಳು
**(c) 30 ವರ್ಷಗಳು**
(d) 35 ವರ್ಷಗಳು

**93. ಭಾರತದ ರಾಷ್ಟ್ರಧ್ವಜದ ಉದ್ದ ಮತ್ತು ಅಗಲದ ನಡುವಿನ ಅನುಪಾತ**

(a) 5 ： 3
**(b) 3 ： 2**
(c) 3 ： 4
(d) 2 ： 1

**94. ಇದು ಪಾರ್ಸಿಗಳ ಪವಿತ್ರ ಗ್ರಂಥ**

(a) ತೊರಾಹ
(b) ಬೈಬಲ್
**(c) ಝೆಂಡ್ ಅವೆಸ್ತಾ**
(d) ಗೀತಾ


**95. ಭಾರತದ ಸರ್ವೋಚ್ಚ ನ್ಯಾಯಾಲಯದ ಪ್ರಸ್ತುತ ಮುಖ್ಯ ನ್ಯಾಯಾಧೀಶರು**

(a) ಜಸ್ಟೀಸ್ ಡಿ.ವಾಯ್. ಚಂದ್ರಚೂಡ್
**(b) ಜಸ್ಟೀಸ್ ಶರದ್ ಬಾಬ್ಡೆ**
(c) ಜಸ್ಟೀಸ್ ಅಶೋಕ್ ಭೂಷಣ್
(d) ಜಸ್ಟೀಸ್ ಎಸ್. ಅಬ್ದುಲ್ ನಸೀರ್

**96. ಮಹಾತ್ಮ ಗಾಂಧಿಯವರ ಸಂಪಾದಕತ್ವದಲ್ಲಿ ಬರುತ್ತಿದ್ದ ಇಂಗ್ಲೀಷ್ ವಾರಪತ್ರಿಕೆ**

(a) ಕೇಸರಿ
(b) ಕಾಮ್ರೆಡ್
(c) ಬಾಂಬೆ ಕ್ರಾನಿಕಲ್
**(d) ಯಂಗ್ ಇಂಡಿಯಾ**

**97. ಈ ಕೆಳಗಿನವುಗಳಲ್ಲಿ ಯಾವುದು ನ್ಯಾಯಧೀಶ, ಕಳ್ಳ ಮತ್ತು ಅಪರಾಧಿಯ ಸಂಬಂಧವನ್ನು ಸರಿಯಾಗಿ ಪ್ರತಿನಿಧಿಸುತ್ತದೆ?**




**98. ಒಂದು ಅಶ್ವಶಕ್ತಿಯು ಇದಕ್ಕೆ ಸಮನಾಗಿದೆ.**

(a) 736 ವ್ಯಾಟ್ಸ್
**(b) 746 ವ್ಯಾಟ್ಸ್**
(c) 748 ವ್ಯಾಟ್ಸ್
(d) 756 ವ್ಯಾಟ್ಸ್

**99. ಆಲ್‌ಫ್ರೆಡ್ ನೋಬಲ್‌ರವರು ಇದನ್ನು ಕಂಡು ಹಿಡಿದನಂತರ ಅವರ ಹೆಸರಿನಲ್ಲಿ ನೋಬೆಲ್ ಪ್ರಶಸ್ತಿ ನೀಡಲು ಪ್ರಾರಂಭಿಸಲಾಯಿತು?**

(a) ವಿಮಾನ
(b) ಟೆಲಿಫೋನ್
**(c) ಡೈನಾಮೈಟ್**
(d) ಸೇಫ್ಟಿ ಲ್ಯಾಂಪ್

**100. ಆಕೆಯು 4 ಕಿಲೋಮೀಟರ್ ಉದ್ದಳತೆಯಲ್ಲಿ 289 ಆಲದ ಮರವನ್ನು ನೆಟ್ಟು ಬೆಳೆಸಿ ಪರಿಸರವಾದಿ ಎಂದು ಗುರುತಿಸಿಕೊಂಡಿದ್ದಾರೆ. ಆ ಕಾರಣದಿಂದ ಸಾಲುಮರ ಎಂದು ಬಿರುದು ಗಳಿಸಿದ್ದಾರೆ. ಆಕೆಯ ಹೆಸರು.**

**(a) ತಿಮ್ಮಕ್ಕ**
(b) ರಾಮಕ್ಕ
(c) ರಾಜಮ್ಮ
(d) ಇವುಗಳಲ್ಲಿ ಯಾವುದೂ ಅಲ್ಲ.